ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 02.12.2025

ಪಾಟೀ ಸವಾಲು ಃ ಪ್ರತಿವಾದಿಯ ಪರವಾಗಿ ಶ್ರೀ ಎಂ.ಸಿ.ಆರ್ ವಕೀಲರಿಂದ

1. ವಾದಿಯು ನನ್ನ ಸ್ನೇಹಿತ. ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ದಿನೇಶ್ ಬಿನ್ ಚಂದ್ರೇಗೌಡ ಎಂದರೆ ನನ್ನ ಹೆಸರಲ್ಲ ಮತ್ತು ಅವರು ನನಗೆ ಗೊತ್ತಿಲ್ಲ. ನಿಪಿ-1 ರ 4 ನೇ ಪುಟದಲ್ಲಿ ಗುರುತಿಸುವವರು ಎಂದು ಸುನಿಲ್ ಮತ್ತು ದಿನೇಶ್ ಎಂದು ನಮೂದಿದೆ ಎಂದರೆ ಸಾಕ್ಷಿಯು ದಾಖಲೆಯನ್ನು ನೋಡಿ ಸರಿ ಇದೆ ಎಂದು ನುಡಿಯುತ್ತಾರೆ. ಹತ್ತು ಲಕ್ಷ ರೂಪಾಯಿಗಳನ್ನು ವಾದಿಯು ಪ್ರತಿವಾದಿಗೆ ನೀಡದೆ ಇದ್ದ ಕಾರಣ ದಿನೇಶ್ ರವರು ದಾಖಲೆಗೆ ಸಹಿ ಮಾಡಿಲ್ಲ ಎಂದರೆ ಸಾಕ್ಷಿಯು ಸಾಕ್ಷಿದಾರನಾಗಿ ಮೊದಲೇ ನಾನು ಸಹಿ ಮಾಡಿದ್ದೆ ಎಂದು ನುಡಿಯುತ್ತಾರೆ. ನಂತರ ನಾನು, ಬಸವರಾಜು ಮತ್ತು ಮೋಹನ್ ರವರು ದಿನೇಶ್ ರವರ ಜಾಗದಲ್ಲಿ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1 ರ ದಾಖಲೆಯನ್ನು ಸೃಷ್ಟಿನೇ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.